

ಶುಶ್ರೂಷಕ ವೃತ್ತಿ ಅಮ್ಮನ ಪಾತ್ರದ ಹಾಗೆ. ಅವರ ಸೇವೆ ಅದೆಷ್ಟೇ ಮುಖ್ಯವಾಗಿದ್ದರೂ, ಅವಶ್ಯಕವಾಗಿದ್ದರೂ, ಗಣ್ಯವಾಗಿದ್ದರೂ ಹೆಚ್ಚಾಗಿ ಪರಿಗಣನೆಗೆ ಒಳಗಾಗುವುದೇ ಇಲ್ಲ. ಟೇಕನ್ ಫಾರ್ ಗ್ರಾಂಟೆಡ್ ಅನ್ನೋ ಮನೋಧರ್ಮ.

■ **ಶಾಂತಿ ಕೆ. ಅಪ್ಪಣ್ಣ**

# ಶುಶ್ರೂಷಕ ವೃತ್ತಿಯೆಂಬ ಅಮ್ಮನ ಪಾತ್ರ

ನರ್ಸ್‌ಗಳಿಗೆ ಸಲಾಂ!

ನೀವು ಇತ್ತೀಚೆಗಿನ ಒಂದು ಸೀರಿಯಲ್ ನೋಡುತ್ತಿದ್ದೀರಿ. ಅದರಲ್ಲಿ ಆಸ್ಪತ್ರೆ ಸೀನ್. ಡಾಕ್ಟರ್ ಅತ್ಯಂತ ಪ್ರೇಮದಿಂದ, ಸಹನೆಯಿಂದ ರೋಗಿಯೊಡನೆ ಮಾತಾಡುತ್ತಿರುತ್ತಾರೆ. ಈಗ ಏನೋ ಪರೀಕ್ಷೆ ಮಾಡಬೇಕಿದೆ. ಆಗ ಡಾಕ್ಟರ್‌ಗೆ ನರ್ಸ್ ಅವಶ್ಯಕತೆ ಎದುರಾಗುತ್ತದೆ. ಇಷ್ಟೂ ಹೊತ್ತು ಸವಿಯಾಗಿ ಮಾತಾಡುತ್ತಿದ್ದ ಡಾಕ್ಟರ್ ಮುಖದಲ್ಲಿ ಕಠೋರತೆಯೊಂದು ಪಡಿಮೂಡಿ, ಧ್ವನಿ ಕರ್ಕಶವಾಗುತ್ತದೆ. (ಇಲ್ಲಿ ಕೋರೆಹಲ್ಲು ಮತ್ತು ಕೊಂಬುಗಳು ಇನ್‌ವಿಸಿಬಲ್!) ಅವರು 'ನರ್ಸ್' ಎಂದು ಕೂಗುತ್ತಾರೆ, ಅಂದರೆ ಕರೆಯುತ್ತಾರೆ. ಆಗ ಅಲ್ಲಿಗೆ ತುಂಬ ಸಾಧಾರಣ ರೂಪಿನ, ಎಣ್ಣೆ ಮುಖದ, ಉದ್ದನೆಯ ಜುಮುಕಿಯಂತಹ ಕಿವಿಯೋಲೆ ತೊಟ್ಟ, ಲೂಸ್ ಲೂಸಾದ, ಮಂಡಿಯುದ್ದ ಫ್ರಾಕು ತೊಟ್ಟ ಪ್ಯಾಲಿ ಮೂತಿಯ ನರ್ಸಿನ ಆಗಮನವಾಗುತ್ತದೆ (ಆಲ್ವೇಸ್ ವಿಥ್ ಅ ಟ್ರೇ). ಡಾಕ್ಟರ್ ಪಾತ್ರಧಾರಿ ಆಕೆಗೆ ಅದೇ ಕರ್ಕಶ ಧ್ವನಿಯಲ್ಲಿ ಪೇಷಂಟಿನ ಕುರಿತ ಏನೋ ನಿರ್ದೇಶನ ಕೊಡುತ್ತಾರೆ. ನರ್ಸ್ ಅದೇ ಪ್ಯಾಲಿಮೂತಿಯೊಂದಿಗೆ ಗಡಿಬಿಡಿಯಿಂದ 'ಸರಿ' ಅನ್ನುತ್ತಾಳೆ. ಡಾಕ್ಟರ್ ಮರಳಿ ತನ್ನ ಹಸನ್ಮುಖ ಸ್ವರೂಪಧಾರಣೆ ಮಾಡಿ ಶುದ್ಧ ಅಂತಃಕರಣದಿಂದ ಪೇಷಂಟಿಗೆ ಮುಂದೇನು ಮಾಡಬೇಕೆಂಬುವುದರ ಕುರಿತ ಮಾಹಿತಿ ಕೊಡುತ್ತಾರೆ. ಹಿಮ್ಮೇಳಕ್ಕೆ ಮ್ಯೂಸಿಕ್ ಮತ್ತೊಂದು, ಮಗದೊಂದು. ಅಲ್ಲಿಗೆ ಸೀನ್ ಮುಗಿಯುತ್ತದೆ.

ಇದು ಕಥೆ!

ಬಹಳಷ್ಟು ಸಿನಿಮಾಗಳಲ್ಲಿ, ಸೀರಿಯಲ್‌ಗಳಲ್ಲಿ ನರ್ಸ್‌ಗಳು ಚಿತ್ರಿತವಾಗುವುದು ಇಂಥದ್ದೇ ಛಾಯೆಯಲ್ಲಿ. ಆದರೆ ವಸ್ತುಸ್ಥಿತಿ ಹಾಗಿಲ್ಲ. ನರ್ಸ್ ಕೆಲಸವೆಂಬುದು ನಿಜಕ್ಕೂ ಜವಾಬ್ದಾರಿಯುತ, ಮೌಲ್ಯಯುತ ಕೆಲಸ. ಅದನ್ನು ತಿಳಿದ ಯಾರೂ ನರ್ಸ್ ಜೊತೆ ಹಾಗೆ ಕಿರುಚಿದಂತೆ ಮಾತಾಡುವುದಿಲ್ಲ ಮತ್ತು ನರ್ಸಿಂಗ್ ಶಿಕ್ಷಣ ಪಡೆದ ಯಾವ ಜವಾಬ್ದಾರಿಯುತ ನರ್ಸೂ ಹಾಗೆ ಪ್ಯಾಲಿ ಮುಖ ಹೊತ್ತುಕೊಂಡು ತಿರುಗುವುದಿಲ್ಲ. ನರ್ಸಿಂಗ್‌ನಲ್ಲಿ ಇಂದು ಎಎನ್‌ಎಮ್ ಮತ್ತು



ರೈಲ್ವೇಸ್‌ನಲ್ಲಿ ಸೀನಿಯರ್ ನರ್ಸಿಂಗ್ ಸೂಪರಿಂಟೆಂಡೆಂಟ್ ಆಗಿರುವ ಶಾಂತಿ ಕೆ. ಅಪ್ಪಣ್ಣ ಅವರು ಕನ್ನಡದ ಹೊಸ ತಲೆಮಾರಿನ ಪ್ರಮುಖ ಕತೆಗಾರ್ತಿಯೂ ಹೌದು.

ಡಿಪ್ಲೊಮಾ ತರಬೇತಿಗಳನ್ನೂ ದಾಟಿ ಬಿ.ಎಸ್ಸಿ., ಎಂ.ಎಸ್ಸಿ. ತನಕ ಓದಬಹುದು. ಮಾತ್ರವಲ್ಲ, ಇದರಲ್ಲಿ ಪಿಎಚ್‌.ಡಿ. ಕೂಡ ಪಡೆಯಬಹುದು. ಈಗ ಈ ಕ್ಷೇತ್ರದಲ್ಲಿ ಮಹಿಳೆಯರಷ್ಟೇ ಅಲ್ಲದೆ ಪುರುಷರೂ ಕಾರ್ಯನಿರ್ವಹಿಸುತ್ತಾರೆ. ಹೊರದೇಶಗಳಲ್ಲೂ ಭಾರತದ ಶುಶ್ರೂಷಕರಿಗೆ ಅಪಾರ ಬೇಡಿಕೆ ಇದೆ. ಅಲ್ಲದೆ ಉತ್ತಮ ಸಂಬಳ, ಸವಲತ್ತುಗಳು ಮತ್ತು ಜವಾಬ್ದಾರಿಯುತ, ಗೌರವಯುತ ಹುದ್ದೆಯಾಗಿ ಇದು ಮಾರ್ಪಾಡಾಗಿದೆ. ಆದರೆ ನಮ್ಮ ದೇಶದಲ್ಲಿ ಇಂದಿಗೂ ಶುಶ್ರೂಷಕರ ಬಗ್ಗೆ ಸಮಾಜದಲ್ಲಿ ಒಂದು ಬಗೆಯ ಅಸಡ್ಡೆಯನ್ನು ನಾವು ಕಾಣುವುದು ವಿಷಾದನೀಯ. ಅವರ ವೃತ್ತಿಯ ಬಗ್ಗೆ ಜನರಲ್ಲಿ ಸರಿಯಾದ ಅರಿವು ಇಲ್ಲದಿರುವುದೂ ಇದಕ್ಕೊಂದು ಕಾರಣ.

ನಿಜ, ನರ್ಸಿಂಗ್ ಕೆಲಸದ ವ್ಯಾಪ್ತಿಯ ಬಗೆಗೆ, ಅವರ ಜವಾಬ್ದಾರಿ ಮತ್ತು ಒತ್ತಡಗಳ ತಿಳಿಯದವರಷ್ಟೇ ಹೀಗೆ ಅಸಡ್ಡೆ ಮಾಡಲು ಸಾಧ್ಯ. ನರ್ಸಿಂಗ್‌ನ ವ್ಯಾಪ್ತಿ ದೊಡ್ಡದು. ಇಡೀ ಆಸ್ಪತ್ರೆಯ ಅಷ್ಟೂ ಸಿಸ್ಟಮ್‌ಗಳನ್ನು ಬೆಸೆಯುವ ಕೆಲಸ ಮಾಡುವುದು ನರ್ಸ್‌ಗಳೇ ಆಗಿರುತ್ತಾರೆ. ಡಾಕ್ಟರ್, ರೋಗಿ ಮತ್ತು ರೋಗಿಯ ಸಂಬಂಧಿಕರ ನಡುವಣ ಕೊಂಡಿಯಾಗಿ ಕಾರ್ಯನಿರ್ವಹಿಸುವುದೂ ಶುಶ್ರೂಷಕರೇ.

ಸುಮ್ಮನೊಂದು ಉದಾಹರಣೆ ಕೊಡುವುದಾದರೆ – ಆತ ಎಂಥ ಒಳ್ಳೆಯ ಸರ್ಜನ್ನೇ ಆಗಿರಲಿ, ಆತ ಸಕ್ಸಸ್‌ಫುಲ್ ಆಗಿ